**Akashvani : Bangalore**
**National Bulletin In Kannada**
**13.09.2024 / 19.35 hrs**
**ಆಕಾಶವಾಣಿ, ಬೆಂಗಳೂರು**
**ರಾಷ್ಟ್ರೀಯ ವಾರ್ತೆಗಳು**
**13.09.2024 / 19.35 hrs**

**<><*<><>*><>**

ಮುಖ್ಯಾಂಶಗಳು

**೧. ಪ್ಯಾರಾಲಿಂಪಿಕ್ಸ್ ಪದಕ ವಿಜೇತ ಕ್ರೀಡಾಪಟುಗಳೊಂದಿಗೆ ಪ್ರಧಾನಿ ನರೇಂದ್ರ ಮೋದಿ ಸಂವಾದ**

**೨. ಅಭಿವೃದ್ಧಿಯ ಯಾನದಲ್ಲಿ ಯುವ ಸಮೂಹವೆ ಚಾಲನಾ ಶಕ್ತಿ- ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್**

**೩. ನಾಳೆಯಿಂದ ನಡೆಯ ಬೇಕಿದ್ದ ಕೆಪಿಎಸ್‌ಸಿ ಗ್ರೂಪ್ 'ಬಿ' ಸ್ಪರ್ಧಾತ್ಮಕ ಪರೀಕ್ಷೆ ಮುಂದೂಡಿಕೆ**

**೪. ಹದಿಹರೆಯದ ಬಾಲಕಿಯರ ರಕ್ತಹೀನತೆಗೆ 'ಸಿದ್ಧ' ಔಷಧ ಪರಿಣಾಮಕಾರಿ- ಆಯೂಷ್ ಅಧ್ಯಯನ ವರದಿ**

**೫. ವಿಯೆಟ್ನಾಂ ಸೂಪರ್ ಓಪನ್ ಬ್ಯಾಡ್ಮಿಂಟನ್ ಟೂರ್ನಿ; ಸೆಮಿ ಫೈನಲ್ಸ್ ಪ್ರವೇಶಿಸಿದ ಭಾರತದ ತನಿಶಾ ಕ್ರಾಸ್ಟೊ ಮತ್ತು ಧ್ರುವ ಕಪಿಲಾ ಜೋಡಿ**

**<><*<><>*><>**

ಪ್ಯಾರಿಸ್ ಪ್ಯಾರಾಲಿಂಪಿಕ್ಸ್ ನಲ್ಲಿ ದಾಖಲೆಯ ಪ್ರದರ್ಶನ ನೀಡಿ ದೇಶಕ್ಕೆ ಹಿಂದಿರುಗಿರುವ ದಿವ್ಯಾಂಗ ಕ್ರೀಡಾಪಟುಗಳನ್ನು ಪ್ರಧಾನಿ ನರೇಂದ್ರ ಮೋದಿ ಅವರು, ತಮ್ಮ ನಿವಾಸದಲ್ಲಿ ಭೇಟಿ ಮಾಡಿ ಸಂವಾದ ನಡೆಸಿದರು. ಈ ವೇಳೆ, ಎಲ್ಲ ಕ್ರೀಡಾಪಟುಗಳನ್ನೂ ಪ್ರಧಾನಿ ವಿಚಾರಿಸಿದ್ದು, ವಿಶೇಷ. ಪದಕ ವಿಜೇತ ಕ್ರೀಡಾಪಟುಗಳನ್ನು ಅಭಿನಂದಿಸಿದರು. ಅವರ ಅನುಭವಗಳಿಗೆ ಕಿವಿಯಾದರು. ಅನೇಕ ಕ್ರೀಡಾಪಟುಗಳು ಪ್ರಧಾನಿ ಅವರಿಗೆ ವಿಶೇಷ ಉಡುಗೊರೆಗಳನ್ನು ಸಲ್ಲಿಸಿದರು. ಸಂವಾದದಲ್ಲಿ ಪ್ರಧಾನಿ, ಸಮಾಜದಲ್ಲಿ ದಿವ್ಯಾಂಗ ಜನರನ್ನು ನೋಡುವ ದೃಷ್ಟಿಕೋನ ಬದಲಾಗಬೇಕಾಗಿದೆ. ನಿಮ್ಮ ಮೂಲಕ ದೇಶದಲ್ಲಿ ಒಂದು ಸಂಸ್ಕೃತಿ ಸೃಷ್ಟಿಸಲು ಬಯಸುತ್ತೇನೆ. ದಿವ್ಯಾಂಗ ಜನರ ಕುರಿತಾಗಿ ದೇಶದ ಪ್ರತಿ ನಾಗರಿಕರ ದೃಷ್ಟಿಕೋನ ಬದಲಾಗಬೇಕು. ದಿವ್ಯಾಂಗ ಜನರು ಎದುರಿಸುವ ಸಮಸ್ಯೆಗಳನ್ನು ಅರಿತುಕೊಳ್ಳಬೇಕು. ದಯೆಯ ಅಗತ್ಯವಿಲ್ಲ, ಗೌರವದ ಭಾವನೆಯಿಂದ ನೋಡುವಂತಹ ವಾತಾವರಣವನ್ನು ಸೃಷ್ಟಿಸಬೇಕಾಗಿದೆ ಎಂದು ಹೇಳಿದರು. ದಿವ್ಯಾಂಗ ಕ್ರೀಡಾಪಟುಗಳು ಇಡೀ ಸಮಾಜದ ಮನಸ್ಥಿತಿಯನ್ನು ಬದಲಿಸುವಂತಹ ಕೊಡುಗೆ ನೀಡುತ್ತಿದ್ದಾರೆ. ಪದಕಗಳ ಮೂಲಕ ಸಾಮಾಜಿಕ ಪರಿಸರವನ್ನು ಪರಿವರ್ತಿಸುತ್ತಿದ್ದಾರೆ ಎಂದು ಶ್ಲಾಘಿಸಿದರು.

**<><*<><>*><>**

ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರು, ಅಜ್ಮೀರ್‌ನಲ್ಲಿರುವ ರಾಜಸ್ಥಾನದ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಇಂದು "ವಿಕಸಿತ ಭಾರತದಲ್ಲಿ ಉನ್ನತ ಶಿಕ್ಷಣದ ಮಹತ್ವ'ದ ಕುರಿತ ಉಪನ್ಯಾಸ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.ಬಳಿಕ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ, ದೇಶ ಇಂದು ಪ್ರತಿ ಕ್ಷೇತ್ರದಲ್ಲೂ ಪ್ರಗತಿ ಸಾಧಿಸುತ್ತಿದೆ. ಭೂಮಿ, ಬಾಹ್ಯಾಕಾಶದಲ್ಲಿ ಹೊಸ ಹೊಸ ಸಾಧನೆಗಳನ್ನು ಮಾಡುತ್ತಿದೆ. ಸವಾಲಿನ ಈ ಸಮಯದಲ್ಲಿ ದೇಶಕ್ಕಾಗಿ ಎಲ್ಲರೂ ತಮ್ಮ ಕರ್ತವ್ಯ ನಿಭಾಯಿಸಬೇಕಾಗಿದೆ ಎಂದು ಕರೆ ನೀಡಿದರು. ಹಿಂದೆ ದೀರ್ಘಕಾಲದಿಂದ ದೇಶದ ಅರ್ಥ ವ್ಯವಸ್ಥೆ ಲಂಡನ್, ಪ್ಯಾರಿಸ್ ನಗರಗಳಿಗಿಂತ ಕಡಿಮೆಯಿತ್ತು. ಇಂದು ವಿಶ್ವದಲ್ಲೇ ೫ನೇ ಬೃಹತ್ ಆರ್ಥಿಕತೆ ಹೊಂದಿರುವ ದೇಶವಾಗಿದೆ. ಮುಂದಿನ ೨ ವರ್ಷಗಳಲ್ಲಿ ೩ನೇ ಅತಿದೊಡ್ಡ ಆರ್ಥಿಕತೆಯ ರಾಷ್ಟ್ರವಾಗಲಿದೆ. ದೇಶದ ಪ್ರಗತಿಯಲ್ಲಿ ಉನ್ನತ ಶಿಕ್ಷಣದ ಪಾತ್ರ ಮಹತ್ವದ್ದಾಗಿದ್ದು, ಈ ಪಯಣದಲ್ಲಿ ಯುವಜನತೆ ಮಹತ್ವಪೂರ್ಣ ಸ್ಥಾನ ನಿಭಾಯಿಸಲಿದ್ದಾರೆ. ಈಗ ಅಭಿವೃದ್ಧಿಯ ಧೀರ್ಘ ಓಟ ಆರಂಭವಾಗಿದ್ದು, ಯುವಜನತೆಯೇ ಅದರ ಚಾಲನಾ ಶಕ್ತಿಯಾಗಿದ್ದಾರೆ ಎಂದು ಹೇಳಿದರು.

**<><*<><>*><>**

ಕರ್ನಾಟಕದಲ್ಲಿ ಕೆಪಿಎಸ್‌ಸಿ ಗ್ರೂಪ್ 'ಬಿ' ಹುದ್ದೆಗಳಿಗೆ ನಾಳೆ ಮತ್ತು ನಾಡಿದ್ದು, ನಡೆಯಬೇಕಿದ್ದ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಮುಂದೂಡಲಾಗಿದೆ ಎಂದು ಕೆಪಿಎಸ್‌ಸಿ ಪ್ರಕಟಣೆ ತಿಳಿಸಿದೆ. ಎಲ್ಲ ಪ್ರವರ್ಗಗಳಿಗೆ ಒಂದು ಬಾರಿಗೆ ಅನ್ವಯವಾಗುವಂತೆ ಗರಿಷ್ಠ ವಯೋಮಿತಿಯಲ್ಲಿ ಮೂರು ವರ್ಷಗಳ ಸಡಿಲಿಕೆ ಮಾಡಿ ಆದೇಶ ಜಾರಿ ಮಾಡಲಾಗಿದೆ. ಹೀಗಾಗಿ ಹೊಸದಾಗಿ ಅರ್ಜಿ ಸಲ್ಲಿಸಲು ಅವಕಾಶ ನೀಡಬೇಕಾಗಿದೆ. ಶನಿವಾರ ಕನ್ನಡ ಭಾಷಾ ಪರೀಕ್ಷೆ ಮತ್ತು ಭಾನುವಾರ ನಡೆಯಬೇಕಿದ್ದ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಮುಂದೂಡಲಾಗಿದೆ. ಸದರಿ ಅಧಿಸೂಚನೆಯಲ್ಲಿನ ಹುದ್ದೆಗಳಿಗೆ ಇತರೆ ದಿನಾಂಕಗಳಲ್ಲಿ ನಿಗದಿಪಡಿಸಲಾಗಿದ್ದ ನಿರ್ದಿಷ್ಟ ಪತ್ರಿಕೆಗಳ ಸ್ಪರ್ಧಾತ್ಮಕ ಪರೀಕ್ಷೆಗಳನ್ನೂ ಸಹ ಮುಂದೂಡಲಾಗಿದೆ. ಹೊಸದಾಗಿ ಅರ್ಜಿಸಲ್ಲಿಸಲು ಕಾಲಾವಕಾಶ ಮುಗಿದ ನಂತರ ಪರೀಕ್ಷೆಗೆ ಪರಿಷ್ಕೃತ ವೇಳಾಪಟ್ಟಿಯನ್ನು ಪ್ರಕಟಿಸಲಾಗುವುದು ಎಂದು ಆಯೋಗ ತಿಳಿಸಿದೆ.

**<><*<><>*><>**

ಇತ್ತೀಚಿನ ದಿನಗಳಲ್ಲಿ ತೀವ್ರವಾಗಿ ಕಾಡುತ್ತಿರುವ ರಕ್ತ ಹೀನತೆಗೆ 'ಸಿದ್ಧ' ಔಷಧಿಗಳು ರಾಮಬಾಣವಾಗಿ ಪರಿಣಮಿಸಿವೆ. ಸಿದ್ಧ ಔಷಧಗಳ ಸಂಯೋಜನೆಯಿಂದ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದಾಗಿದ್ದು, ಅದರಲ್ಲೂ ನಿರ್ದಿಷ್ಟವಾಗಿ ಹದಿಹರೆಯದ ಬಾಲಕಿಯರಲ್ಲಿ 'ಸಿದ್ಧ' ಔಷಧಿಗಳಿಂದ ರಕ್ತಹೀನತೆ ತಗ್ಗಿಸಬಹುದು ಎಂದು ಅಧ್ಯಯನದ ವರದಿ ತಿಳಿಸಿದೆ. ಸಂಶೋಧಕರ ಈ ಮಹತ್ವದ ಅಧ್ಯಯನ ವರದಿ ಪ್ರತಿಷ್ಠಿತ "ಇಂಡಿಯನ್ ಜರ್ನಲ್ ಆಫ್ ಟ್ರೆಡಿಷನಲ್ ನಾಲೆಡ್ಜ್" ನಲ್ಲಿ ಪ್ರಕಟವಾಗಿದೆ. ಬಾಲಕಿಯರಲ್ಲಿ ರಕ್ತಹೀನತೆಯನ್ನು ಕಡಿಮೆ ಮಾಡುವ 'ಸಿದ್ಧ' ಔಷಧಿಗಳ ಬಳಕೆಯನ್ನು ಮುಖ್ಯವಾಹಿನಿಗೆ ತರಲು ಆಯುಷ್ ಸಚಿವಾಲಯ ಮುಂದಾಗಿದೆ.

ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಸಿದ್ಧ ವಿಭಾಗದ ನಿರ್ದೇಶಕಿ ಡಾ. ಆರ್. ಮೀನಾಕುಮಾರಿ. ಈ ಕುರಿತು ಮಾಹಿತಿ ನೀಡಿ, “ಸಚಿವಾಲಯದ ಸಾರ್ವಜನಿಕ ಆರೋಗ್ಯ ಉಪಕ್ರಮಗಳಲ್ಲಿ ಸಿದ್ಧ ಔಷಧವು ಗಮನಾರ್ಹ ಪಾತ್ರ ವಹಿಸುತ್ತದೆ. ಹದಿಹರೆಯದ ಹುಡುಗಿಯರಲ್ಲಿ ಮೂಡಿಸಿದ ಜಾಗೃತಿ, ಒದಗಿಸಿದ ಆಹಾರ, ಸಲಹೆ, ತಡೆಗಟ್ಟುವ ಆರೈಕೆ ಮತ್ತು ಸಿದ್ಧ ಔಷಧಿಗಳ ಮೂಲಕ ಚಿಕಿತ್ಸೆಯಿಂದ ರಕ್ತಹೀನತೆ ರೋಗಿಗಳಿಗೆ ಚಿಕಿತ್ಸಕ ಪ್ರಯೋಜನಗಳನ್ನು ಒದಗಿಸಿದೆ. ಆದ್ದರಿಂದ ರಕ್ತಹೀನತೆಗೆ ಸಿದ್ಧ ಔಷಧಗಳು ವಿವಿಧ ವಲಯಗಳಲ್ಲಿ ಪರಿಣಾಮಕಾರಿ ಮತ್ತು ಸುಲಭ ದರದಲ್ಲಿ ಚಿಕಿತ್ಸೆ ನೀಡುವ ಮೂಲಕ ಸಾರ್ವಜನಿಕ ಆರೋಗ್ಯಕ್ಕೆ ಕೊಡುಗೆ ನೀಡಬಹುದು ಎಂದು ತಿಳಿಸಿದ್ದಾರೆ.

<><*<><>*><>

’ನಮ್ಮ ದೇಶವನ್ನು ನೋಡು ಜನರ ಆಯ್ಕೆ- ೨೦೨೪’ ಅಭಿಯಾನ ಈ ತಿಂಗಳ ೧೫ರ ವರೆಗೆ ಮುಂದುವರೆಯಲಿದೆ. ದೇಶದ ಪ್ರಮುಖ ಮತ್ತು ಆಕರ್ಷಣೀಯ ಪ್ರವಾಸಿ ತಾಣಗಳನ್ನು ನಾಗರೀಕರ ಸಹಭಾಗಿತ್ವದಲ್ಲಿ ಗುರುತಿಸುವ ದೇಖೊ ಅಪ್ನಾ ದೇಶ್, ಪೀಪಲ್ ಚಾಯ್ಸ್ ಅಭಿಯಾನದಡಿ ಭಾಗವಹಿಸಿ ಪ್ರಶ್ನೆಗಳಿಗೆ ಉತ್ತರ ನೀಡುವ ಮೂಲಕ ಬಹುಮಾನಗಳನ್ನು ಗೆಲ್ಲಲು ಅವಕಾಶ ಕಲ್ಪಿಸಲಾಗಿದೆ.  ಧಾರ್ಮಿಕ, ಸಾಂಸ್ಕೃತಿಕ, ಪಾರಂಪರಿಕ, ನೈಸರ್ಗಿಕ, ವನ್ಯಜೀವಿ, ಸಾಹಸ ಪ್ರವಾಸೋದ್ಯಮ ಒಳಗೊಂಡಂತೆ ಐದು ವಿಭಾಗಗಳಲ್ಲಿ ನೆಚ್ಚಿನ ಪ್ರವಾಸಿ ತಾಣಗಳ ಬಗ್ಗೆ ಅಭಿಯಾನದಡಿ ಮಾಹಿತಿ ನೀಡಲು ಅವಕಾಶ ಕಲ್ಪಿಸಲಾಗಿದೆ. ಪ್ರವಾಸೋದ್ಯಮ ತಾಣಗಳನ್ನು ಹೆಚ್ಚಿಸಲು ಈ ಕ್ರಮ ಕೈಗೊಳ್ಳಲಾಗಿದೆ. ಪ್ರವಾಸೋದ್ಯಮ ಸಚಿವಾಲಯದ ಅಧಿಕೃತ ಜಾಲತಾಣದ ಪೋರ್ಟಲ್‌ನಲ್ಲಿ ನೆಚ್ಚಿನ ತಾಣಗಳ ಬಗ್ಗೆ ಮತ ಚಲಾಯಿಸಲು ಅವಕಾಶ ಕಲ್ಪಿಸಲಾಗಿದೆ. ಶ್ರೀನಗರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು, ಈ ಅಭಿಯಾನಕ್ಕೆ ಚಾಲನೆ ನೀಡಿದ್ದರು.  ಇದಲ್ಲದೆ, ಚಿರಪರಿಚಿತವಲ್ಲದ ಪ್ರವಾಸಿ ತಾಣಗಳಾದ ಉಜ್ವಲ ಗಡಿ ಗ್ರಾಮಗಳು, ಯೋಗಕ್ಷೇಮ ಪ್ರವಾಸೋದ್ಯಮ, ವಿವಾಹ ಪ್ರವಾಸೋದ್ಯಮ ವಲಯಗಳಲ್ಲೂ ಮತದಾನ ಮಾಡಲು ಅವಕಾಶ ನೀಡಲಾಗಿದೆ. ಸಾಂಸ್ಕೃತಿಕವಾಗಿ ಗುರುತಿಸಲ್ಪಟ್ಟಿರುವ ಮೈಲಿಗಲ್ಲಿನ ತಾಣಗಳು, ಸಾಂಪ್ರಾದಾಯಿಕವಾಗಿ ಮಹತ್ವ ಪಡೆದ ಪ್ರದೇಶಗಳು ಸಹ ಈ ವ್ಯಾಪ್ತಿಗೆ ಒಳಪಟ್ಟಿವೆ.

<><*<><>*><>

ರಾಜ್ಯದಲ್ಲಿ ೪೫ ಸಾವಿರ ಕೋಟಿ ರೂಪಾಯಿಗಳ ರೈಲ್ವೆ ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ತಿಳಿಸಿದ್ದಾರೆ. ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೈಸೂರು ರೈಲ್ವೆ ವಿಭಾಗವನ್ನು ಅಭಿವೃದ್ಧಿಪಡಿಸಲು ಯೋಜಿಸಲಾಗಿದೆ. ಕೇಂದ್ರ ಸರ್ಕಾರ ಪ್ರತಿಯೊಂದು ವಿಭಾಗಕ್ಕೂ ೭ ಸಾವಿರದ ೫೬೦ ಕೋಟಿ ರೂಪಾಯಿ ಅನುದಾನ ನೀಡುತ್ತಿದೆ. ವರ್ತುಲ ರೈಲು ಯೋಜನೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ. ಇದಕ್ಕಾಗಿ ೪೪೦ ಕೋಟಿ ರೂಪಾಯಿಗಳನ್ನು ಮೀಸಲಿಗಿಡಲಾಗಿದೆ. ಬೆಂಗಳೂರು-ತುಮಕೂರು ಮತ್ತು ಬೆಂಗಳೂರು-ಚಾಮರಾಜನಗರ ಮೆಮೊ ರೈಲುಗಳು ಸಂಚರಿಸಲಿವೆ ಎಂದು ಮಾಹಿತಿ ನೀಡಿದರು.

<><*<><>*><>

ಪಶ್ಚಿಮ ಬಂಗಾಳದಲ್ಲಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು, ಆಡಳಿತ ನಡೆಸಲು ಅಸಮರ್ಥರಾಗಿದ್ದಾರೆ. ಹೀಗಾಗಿ ಕೂಡಲೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ್ ಜೋಶಿ ಹುಬ್ಬಳ್ಳಿಯಲ್ಲಿಂದು ಹೇಳಿದ್ದಾರೆ. ಸಮಸ್ಯೆ ಬಗೆಹರಿಸುವುದನ್ನು ಬಿಟ್ಟು ನಾಟಕವಾಡುತ್ತಿದ್ದಾರೆ. ಹೀಗಾಗಿ ಪಶ್ಚಿಮ ಬಂಗಾಳದಲ್ಲಿ ಜನರಿಗೆ ನ್ಯಾಯ ಒದಗಿಸಲು ವಿಫಲರಾಗಿದ್ದಾರೆ ಎಂದು ತಿಳಿಸಿದರು. ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರಿಗೆ ಸುಪ್ರೀಂ ಕೋರ್ಟ್ ಷರತ್ತು ಬದ್ಧ ಜಾಮೀನು ನೀಡಿದೆ. ಆದರೆ ಅವರನ್ನು ಇನ್ನೂ ದೋಷಮುಕ್ತರಾಗಿ ಹೊರಬಂದಿಲ್ಲ ಎಂದರು. ಈ ಹಿಂದೆ ಬಿಹಾರದ ಮಾಜಿ ಮುಖ್ಯಮಂತ್ರಿ ಲಾಲೂ ಪ್ರಸಾದ್ ಯಾದವ್ ಅವರಿಗೆ ಜಾಮೀನು ಸಿಕ್ಕಿತ್ತು. ಆ ನಂತರ ಶಿಕ್ಷೆಗೆ ಗುರಿಯಾದರು ಎಂದು ಹೇಳಿದ ಅವರು, ಅರವಿಂದ್ ಕೇಜ್ರಿವಾಲ್ ಅವರನ್ನು ಆರೋಪ ಮುಕ್ತ ಮಾಡಿಲ್ಲ. ಬಿಜೆಪಿಗೆ ನ್ಯಾಯಾಂಗದ ಮೇಲೆ ನಂಬಿಕೆ ಇದೆ ಎಂದು ತಿಳಿಸಿದರು.

<><*<><>*><>

ಕೇಂದ್ರ ಸರ್ಕಾರದ ಎನ್‌ಪಿಎಸ್ ವಾತ್ಸಲ್ಯ ಯೋಜನೆಗೆ ಕೇಂದ್ರ ಹಣಕಾಸು ಮತ್ತು ಸಾಂಸ್ಥಿಕ ವ್ಯವಹಾರಗಳ ಸಚಿವೆ ನಿರ್ಮಲಾ ಸೀತಾರಾಮನ್, ಈ ತಿಂಗಳ ೧೮ ರಂದು ಬೆಂಗಳೂರಿನಲ್ಲಿ ಚಾಲನೆ ನೀಡಲಿದ್ದಾರೆ. ಜೆ.ಸಿ. ರಸ್ತೆಯ ಕೆನರಾ ಬ್ಯಾಂಕ್ ಮುಖ್ಯ ಕಚೇರಿಯಲ್ಲಿ ಆಯೋಜಿಸಲಾದ ಸಮಾರಂಭದಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ಪಾಲ್ಗೊಂಡು ಯೋಜನೆಯನ್ನು ಉದ್ಘಾಟಿಸಲಿದ್ದಾರೆ ಎಂದು ಕೆನರಾ ಬ್ಯಾಂಕ್ ಪ್ರಕಟಣೆ ತಿಳಿಸಿದೆ.

<><*<><>*><>

ರಾಜ ಭಾಷೆಯ ವಜ್ರ ಮಹೋತ್ಸವದ ಹಿನ್ನೆಲೆಯಲ್ಲಿ ನಾಳೆ ನವದೆಹಲಿಯಲ್ಲಿ ನಾಲ್ಕನೇ ಅಖಿಲ ಭಾರತೀಯ ರಾಜ ಭಾಷ ಸಮ್ಮೇಳನ ನಡೆಯಲಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಸಮ್ಮೇಳನ ಉದ್ಘಾಟಿಸಲಿದ್ದಾರೆ. ಹಿಂದಿ ಅಧಿಕೃತ ಭಾಷೆಯಾಗಿ ಘೋಷಣೆಯಾಗಿ ೭೫ ವರ್ಷ ತುಂಬಿದ್ದು, ಇದರ ನೆನಪಿಗಾಗಿ ಅಧಿಕೃತ ಭಾಷಾ ಇಲಾಖೆ ಸಮ್ಮೇಳನ ಆಯೋಜಿಸಿದೆ. ಅಮಿತ್ ಶಾ ಅವರು, ರಾಜ ಭಾಷೆ ಕುರಿತ ೭೫ನೇ ವರ್ಷದ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಲಿದ್ದಾರೆ. ನಂತರ ರಾಜ ಭಾಷ ಗೌರವ್ ಮತ್ತು ರಾಜ ಭಾಷ ಕೀರ್ತಿ ಪ್ರಶಸ್ತಿಗಳನ್ನು ಪ್ರದಾನ ಮಾಡಲಿದ್ದಾರೆ.

<><*<><>*><>

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಬಿಜೆಪಿ ವಕ್ತಾರ ಗೌರವ್ ಭಾಟಿಯಾ ಆಗ್ರಹಿಸಿದ್ದಾರೆ. ದೆಹಲಿಯಲ್ಲಿಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅರವಿಂದ ಕೇಜ್ರಿವಾಲ್ ಅವರಿಗೆ ಸುಪ್ರೀಂ ಕೋರ್ಟ್ ಷರತ್ತುಗಳನ್ನು ವಿಧಿಸಿ ಜಾಮೀನು ನೀಡಿದೆ. ಅವರು ವಿದೇಶಕ್ಕೆ

ತೆರಳುವಂತಿಲ್ಲ. ಪ್ರಕರಣಗಳ ಆರೋಪವನ್ನು ನಿರಾಕರಿಸಲಾಗಿಲ್ಲ. ಸುಪ್ರೀಂ ಕೋರ್ಟ್ ಅವರ ಬಂಧನವನ್ನು ಅಕ್ರಮವೆಂದು ಪರಿಗಣಿಸಿಲ್ಲ ಎಂದು ಹೇಳಿದರು.

**<><*<><>*><>**

ಹೊ ಚಿ ಮಿನ್ಹ್ ಸಿಟಿಯಲ್ಲಿ ನಡೆಯುತ್ತಿರುವ ವಿಯೆಟ್ನಾಂ ಸೂಪರ್ ೧೦೦ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ತನಿಶಾ ಕ್ರಾಸ್ಟೊ ಹಾಗೂ ಧ್ರುವ ಕಪಿಲಾ ಮಿಶ್ರ ಡಬಲ್ಸ್‌ನ ಜೋಡಿ ಸೆಮಿಫೈನಲ್ಸ್ ಪ್ರವೇಶಿಸಿದೆ. ಭಾರತದ ಸತೀಶ್ ಕುಮಾರ್ ಕರುಣಾಕರನ್ ಹಾಗೂ ಆಧ್ಯಾ ವರಿಯಾತ್ ಜೋಡಿಯನ್ನು ೧೪-೨೧, ೨೧-೧೦, ೨೧-೧೪ ರ ಅಂತರದಲ್ಲಿ ಮಣಿಸಿ ಮುಂದಿನ ಹಂತಕ್ಕೆ ಪ್ರವೇಶ ಪಡೆಯಿತು. ಪುರುಷರ ಸಿಂಗಲ್ಸ್‌ನಲ್ಲಿ ಭಾರತದ ತರುಣ್ ಮಣ್ಣೆಪಲ್ಲಿ ಅವರನ್ನು ಜಪಾನ್‌ನ ಶಂಘೊ ಓಗವಾನ್ ಅವರು ೧೩-೨೧, ೧೩-೨೧ ರ ಅಂತರದಲ್ಲಿ ಸೋಲಿಸಿದರು. ಈ ಮೂಲಕ ತರುಣ್ ಮಣ್ಣೆಪಲ್ಲಿ ಹೋರಾಟ ಅಂತ್ಯಗೊಂಡಿದೆ.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೮.೩೫ ಕ್ಕೆ <>*><>**